ಕಣ್ಣೀರಾಗುತ್ತಿದ್ದ. ಆಕೆಯ ಈ ನಡತೆಗೆ ಸಂದೇಹವನ್ನೂ ಪಡುತ್ತಾ ಮನಸ್ಸಿಗಾದ ಘಾಸಿಯಿಂದ ಯಾರೊಂದಿಗೂ ಮುಖ ಕೊಟ್ಟು ಮಾತನಾಡದೆ ಒಂಟಿಯಾಗಿರಲು ಪ್ರಯತ್ನಿಸುತ್ತಿದ್ದ. ತಲೆಯೊಳಗೆ ನೆನಪುಗಳ ಸುರಳಿ ತೆರೆತೆರೆಯಾಗಿ ಆಗೊಮ್ಮೆ ಈಗೊಮ್ಮೆ ಎಡೆಬಿಡದೆ ಬರುತ್ತಲೇ ಇದ್ದವು. ಬೇಸರ ಬಂದು ಹಾಸಿಗೆಯಲ್ಲಿ ಅಡ್ಡಾದಾಗಲೆಲ್ಲ ಮತ್ತೆ ಮತ್ತೆ ತನ್ನಿಂದ ಆಗಿರಬಹುದಾದ ಲೋಪಗಳ ಬಗ್ಗೆ ಚಿಂತಿಸುತ್ತಾ ಹೊರಳಾಡುತ್ತಿದ್ದ. ಹೆಂಡತಿ ಮಕ್ಕಳು ಸುಖವಾಗಿ ಇರಬೇಕೆಂದು ಜಮೀನಿನಲ್ಲಿ ಎಡೆಬಿಡದೆ ದುಡಿಯುವುದು, ಅವಳು ತನ್ನ ಜೊತೆ ಕೆಲಸ ಮಾಡಬೇಕೆಂದು ನಿರೀಕ್ಷಿಸದೇ ಎಲ್ಲಾ ಕೆಲಸವನ್ನೂ ತಾನೇ ಮಾಡುವುದು. ಹಣ ಎಷ್ಟು ಬಂದಿದೆ? ಎಷ್ಟು ಖರ್ಚಾಗಿದೆ? ಯಾವುದಕ್ಕೆಲ್ಲಾ ಖರ್ಚಾಗಿದೆ ಎಂಬುವುದನ್ನು ಎಂದೂ ಕೇಳಿದವನಲ್ಲ! ಎಷ್ಟೇ ಆಗಲಿ ಅವಳು ತನ್ನ ಅಕ್ಕನ ಮಗಳು. ಕಳ್ಳುಬಳ್ಳಿ ಸುತ್ತಿಕೊಂಡಿರುವುದರಿಂದ ಮನೆಯ ವ್ಯವಹಾರವನ್ನು ಚೆನ್ನಾಗಿಯೇ ನಿಭಾಯಿಸುತ್ತಾಳೆ ನನ್ನ ಕೈ ಬಿಡಲಾರಳು ಎಂದೆಲ್ಲಾ ನಂಬಿದ್ದ. ಹಾಸಿಗೆಯ ಸುಖಕ್ಕೇನಾದರೂ ಮರುಳಾದಳೆ? ಅವಳದು ಇನ್ನೂ ಚಿಕ್ಕ ವಯಸ್ಸು. ಆ ಹರೆಯದ ಹುಡುಗ ತೋರಿಸಿದ ಆಸೆಗೆ ಮರುಳಾಗಿ ಮನಸ್ಸು ಕದಡಿ ಜಾರಿದಳೇ? ಇಲ್ಲ..,.. ಅವಳಂತಹವಳಲ್ಲ, ಅವಳು ಅಂಥ ಕೆಟ್ಟ ಯೋಚನೆ ಮಾಡಿರಲಾರಳು. ಅವನೇ ಏನೋ ಮೋಡಿ ಮಾಡಿ ಇವಳನ್ನು ಕರೆದುಕೊಂಡು ಹೋಗಿರಬಹುದು ಎನಿಸಿತು ಕರಿವೀರನಿಗೆ.

ಈ ರೀತಿ ಏನೇನೋ ತಲೆಯೊಳಗೆ ವಿಷಯಗಳ ಸಂತೆ ನಡೆಯುತ್ತಿರುವಾಗ ಅವನು ಸಾಕಿದ ನಾಯಿಯು ಒಂದೇ ಸಮನೆ ಬೊಗಳಲು ಪ್ರಾರಂಭಿಸಿತು. ಅದು ಜಮೀನಿನ ದಕ್ಷಿಣ ದಿಕ್ಕಿನ ಮೂಲೆಯಲ್ಲಿರುವ ತಂಗಟೆ ಗಿಡದ ಪೊದೆಯತ್ತ ಮುಖ ಮಾಡಿ ಒಂದೇ ಸಮನೆ ಬೊಗಳುತ್ತಲೇ ಇತ್ತು. ನಾಯಿಯನ್ನು ಒಮ್ಮೆ ಗದರಿಕೊಂಡ ಆದರೂ ನಾಯಿ ಇವನ ಗದರುವಿಕೆಗೆ ಸೊಪ್ಪುಹಾಕದೆ ಆ ಕಡೆ ತಿರುಗಿ ಬೊಗುಳುತ್ತಲೇ ಇತ್ತು. ನಾಯಿ ಎಂದೂ ಹೀಗೆ ವರ್ತಿಸುತ್ತಿರಲಿಲ್ಲ. ಅಲ್ಲಿ ಏನಾದರೂ ಕಂಡಿರಬಹುದು ಅದಕ್ಕೆ ಈ ರೀತಿ ಬೊಗುಳುತ್ತಿದೆ ಎಂದು ಕರಿವೀರ ನೋಡೋಣವೆಂದು ಹಾಸಿಗೆಯಿಂದ ಎದ್ದೇಳಲು ಯತ್ನಿಸಿದಾಗ ಎಡಗಾಲಿನ ಮೀನಖಂಡದಲ್ಲಿ ನೋವೆನಿಸಿತು. ತಡಕಾಡಿ ನೋಡಿಕೊಂಡಾಗ, ಅಲ್ಲಿ ಒಂದು ಸಣ್ಣ ಗೋಲಿಯಾಕಾರದ ಗಟ್ಟಿಯಾದ ಗುಳ್ಳೆಯಾಗಿರುವುದು ಅದರ ಸುತ್ತಲೂ ಸ್ವಲ್ಪ ಕೆಂಪಾಗಿರುವುದು ಕಂಡು ತಾತ್ಸಾರದಿಂದ ಎದ್ದು ನಿಂತಲ್ಲಿಯೇ ನಾಯಿ ಬೊಗಳಿದತ್ತ ದೃಷ್ಟಿ ನೆಟ್ಟ. ತಂಗಟೆ ಗಿಡದ ಪೊದೆಯ ಹತ್ತಿರ ಅಂತದ್ದೇನೂ ಕಾಣಲಿಲ್ಲ. ನಾಯಿಯನ್ನು ಗದರಿಸಿ ಮತ್ತೆ ಅದೇ ಜಾಗಕ್ಕೆ ಬಂದು ಅಡ್ಡಾದ. ಕಾಲಿನಲ್ಲಿ ಯಾವುದೋ ಗೆಡ್ಡೆ ಬೆಳೆಯುತ್ತಾ ಇದೆಯೆಂದು ಅದಕ್ಕೆ ಏನಾದರೂ ಮುಲಾಮು ಹಚ್ಚಿಕೊಳ್ಳಬೇಕೆಂಬ ವಿಚಾರ ಮನದೊಳಗೆ ಬಂದಿತು. ಆದರೂ ಮರು ಕ್ಷಣ ಅದಕ್ಕೇನು ಹಚ್ಚುವುದು! ಅದೇ ವಾಸಿಯಾಗುತ್ತೆಂದು ನಿರ್ಲಕ್ಷ್ಯತನದಿಂದ ಒಂದು ಮಗ್ಗುಲಿಗೆ ಹೊರಳಿಕೊಂಡ.

ಕರುವಿನಕಟ್ಟೆ ಗ್ರಾಮದ ಸುತ್ತಿನಲ್ಲಿರುವ ಬಳ್ಳಾಪುರದ ಸುಭದ್ರಮ್ಮನ ಒಬ್ಬಳೇ ಮಗಳು ಅನ್ನಪೂರ್ಣ. ತನ್ನೂರಿನ ಪ್ರಾಥಮಿಕ ಶಾಲೆಯ ಶಿಕ್ಷಣ ಮುಗಿಸಿ ಕರುವಿನಕಟ್ಟೆಯಲ್ಲಿದ್ದ ಪ್ರೌಢಶಾಲೆಗೆ ದಿನವೂ ಬಳ್ಳಾಪುರದಿಂದ ಓಡಾಡುತ್ತಾ ಹತ್ತನೇ ತರಗತಿಯವರೆಗೂ ಕಲಿತವಳು. ಶಾಲೆಯಲ್ಲಿ ಚುರುಕಾಗಿದ್ದು ಚೆನ್ನಾಗಿ ಓದುತ್ತಿದ್ದಳು. ಪ್ರೌಢಶಾಲೆಯ ಓದು ಮುಗಿದಂತೆಯೇ ತನ್ನ ತಾಯಿಯ ಮತ್ತು ದೊಡ್ಡಮ್ಮ ಹನುಮಕ್ಕಳ ಆಸೆಯಂತೆ ತನ್ನ ಸೋದರ ಮಾವ ಕರಿವೀರನೊಂದಿಗೆ ಮದುವೆ ಆಗಿದ್ದಳು. ಕರಿವೀರ ತನಗಿಂತಲೂ ಹನ್ನೊಂದು ವರ್ಷ ಹಿರಿಯ ಎಂಬುವುದು ಗೊತ್ತಿದ್ದರೂ ತನ್ನ ತಾಯಿಗಿದ್ದ ತವರಿನ ಬಗೆಗಿನ ಸೆಳೆತ, ಹೇಗಾದರೂ ಮಾಡಿ ತವರಿನ ಸಂಬಂಧವನ್ನು ಉಳಿಸಿಕೊಳ್ಳಬೇಕೆಂಬ ಇಚ್ಛೆ ಅವಳಲ್ಲಿ ಯಾವಾಗಲೂ ಕೊರೆಯುತ್ತಿತ್ತು. ತಾಯಿಯ ಚಡಪಡಿಕೆಯನ್ನು ಗಮನಿಸಿ ಅನ್ನಪೂರ್ಣ ಮನಸ್ಸಿನೊಳಗೆ ಬೇರೆ ಯೋಚನೆ ಮಾಡದೆ ಕರಿವೀರನನ್ನೇ ಮದುವೆಯಾಗಿ ಜೀವನ ಸಾಗಿಸುತ್ತಿದ್ದಳು.

